Regd No BG 155

Sri "SATYAVADI"
— DAILY —
MYSORE 4
46 th Year

Protect the cow

— ಶ್ರೀ —

ಸತ್ಯವಾದಿ
SATYAVADI

ಸ್ಥಾಪಕರು— ಅರಮನೆ ಸಿಂಸ್ಥೇದಾರ್ ಎಂ. ಎ ಸುಬ್ಬರಾಯುರು [ಬಿಡಿ ಪ್ರತಿ 3 ಪೈ

11—1—1962

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
" ಸತ್ಯವಾದಿ " ಪತ್ರಿಕೆಯನ್ನು
ತಪ್ಪದೇ ಓದಿ
ದಿನಪತ್ರಿಕೆ ತಿಂಗಳಿಗೆ 6 ಆಣೆ

ಗೋಸಂರಕ್ಷಣೆ ಮಾಡಿ

ಚುನಾವಣೆಯ ನಂತರ ಕಲಹ ಪರಿಹಾರ

ಐದು ಲಕ್ಷ ಮಂದಿ ನಿರಾಶ್ರಿತರು

ಕಲ್ಪಾತಿಯ ಭೂವಿ ಹಿಡುಪಳಿದಾರ ಸಭೆಯ್ರ ಕೇಂಳ ವಿಧ ಸ ಸಭೆಯ ಕಾಂಗ್ರೆಸು ಸದಸ್ಯ ಶೀ ಆರ್. ರಾಘವನೆ.ನ ಸಯು ಮಾಶನಾಡುತಾ, ಕೇಂಳ ಭೂ ಶಾಸನ ಜಾರಿಯಿಂದ ಮಲಬಾರಿನಲ್ಲಿ 5 ಲಕ್ಷ ಕುಟುಂಬಗಳು ನಿರಾಶ್ರಿತವಾಗಿವೆ ಎಂದರು ಎಂದು ಪಾಲ್ಘಾಟಿನ ವಾರ್ತೆ. ಭೂ ಹಿಡ ವಳಿದಾರನು ಈ ದೇಶದ ಪ್ರಜೆ ಅವನಿಗೆ ಅವನ ಹಕ್ಕು ಕೇಳಲು ಅಧಿಕಾರ ವಿದೆ ಎಂದರು ಸರ್ಕಾರ ಹೊಂದಿರುವ ನೀತಿ ನೋಡಿದರೆ ಪರಿಹಾರ ಕೂಡ ಇಲ್ಲ ಎನ್ನಬಹುದು ಎಂದರು

ದಸ್ತಗಿರಿ

ಕಲ್ಲೀಕೋಟೆಯ ಡೊಡ್ಡಪೇಟೆಯಲ್ಲಿ ನಿನ್ನೆ ಅಕ್ಕಿ ಲಾರಿಗಳಮುಂದೆ ಪಿಕೆಟಿಂಗು ಮಾಡಿದ್ದಕ್ಕೆ 14 ಮಂದಿ ಬಂಧಿತರಾದರು

ವಂಗಳೂರು ಹಂಚಿನ ಕಾರ್ಖಾನೆಗೆ ಕೆಲಸಕ್ಕೆ ಹೋಗುತ್ತಿದ್ದ ಹೊಸ ಕೆಲಸಗಾರರನ್ನ ತಡೆದ ಆಪಾದನೆಗಾಗಿ ಮು ಷ್ಕರ ನಡೆಸುತ್ತಿರುವ ಕೆಲಸಗಾರರಲ್ಲಿ ಇ ಪ್ಪತ್ತು ಮಂದಿ ಬಂಧಿಸಲ್ಪಟ್ಟರು

ಕಾಂಗ್ರೆಸಿನ ಭರವಸೆ

ನಿವ್ಯಾಣಿಯಲ್ಲಿ ಕಾಂಗ್ರೆಸ್ಸು ಕಾರ್ಯಕರ್ತರನ್ನು ಕುರಿತು ಮಾಡಿದ ಭಾಷಣದಲ್ಲಿ, ಗೃಹಮಂತ್ರಿ ಶ್ರೀ ಚಿನ್ನಪ್ಪನವರು, ಚುನಾವಣೆಯಲ್ಲಿ ಕಾಂಗ್ರೆಸ್ಸು ಲೋಕಸಭೆಯಲ್ಲಿ ಮತ್ತು ಶಾಸನಸಭೆಗಳಲ್ಲಿ ಶೇಕಡ 80 ಸ್ಥಾನಗಳನ್ನು ಪಡೆಯುವುದು ಖಂಡಿತವೆಂದು ಹೇಳಿದರು.

★

ಅಖಿಲ್ವಾ ಅಣೆಕಟ್ಟು 1970 ರೊಳಗೆ ಪೂರ್ತಿಗೊಳ್ಳುವುದೆಂದು ಕೈರೋ ರೇಡಿಯೋ ಪ್ರಸರಿಸಿದೆ

ಚುನಾವಣೆ ಪ್ರಚಾರ ನಿಷೇಧ

ಮಹಾ ಜನಾವಣೆ ತೀರುವ ವರಿಗೆ ಮೈಸೂರು-ಮಹಾರಾಷ್ಟ್ರ ಗಡಿ ಕಲಹ ಬಗೆಹರಿಯುವುದಿಲ್ಲವೆಂದು ನವ ದೆಹಲಿ ವರದಿಯಿಂದ ಗೊತ್ತಾಗಿದೆ ಈ ಸಮಸ್ಯೆ ಉಲ್ಬಣವಾಗದಿರಲು ಈ ರಾಜ್ಯಗಳ ಮಂತ್ರಿಗಳು ಒಪ್ಪಂದ. ಹೇಳಿಕೆ ಮಾಡದಿರುವ ತೆ ಸೂಚಿಸಿದೆ ಚುನಾವಣೆ ಅದನಂತರ ಹೊಸ ಮಂತ್ರಿಮಂಡಲ ರಚಿಸಲಾಗಿ ಈ ಒಗ್ಗೆ ಹೊಸ ಕ್ರಮ ಕೈಗೊಳ್ಳುವ ನಿರೀಕ್ಷೆ ಇದೆ

ನಾಯಿಯ ಸಮಸ್ಯೆ

ಜಮ್ಮುವಿನಲ್ಲಿ ಆದ ಘಟನೆ. ನಾಯಿಯಾರಿಗೆ ಸೇರಬೇಕೆಂದು ಊರವರಲ್ಲಿ ಆದ ಕಲಹವನ್ನು ಮ್ಯಾಜಿಸ್ಟ್ರೇಟರು ಮೊನ್ನೆ ಬಗೆಹರಿಸಬೇಕಾಯಿತು ನಾಯಿಯನ್ನ ತನ್ನ ಯಜಮಾನನಲ್ಲಿ ವಿಶ್ವಾಸತೋರಲು ಬಿಡುವಂತೆ ನ್ಯಾಯಾಧೀಶರು ಆಜ್ಞೆ ಇತ್ತರು. ಇಬ್ಬರಲ್ಲೂ ನಾಯಿ ವಿಶ್ವಾಸ ತೋರಿದ್ದರಿಂದ ನಾಯಿ ತಮ್ಮದೆಂಬುದಕ್ಕೆ ಸಾಕ್ಷ್ಯ ತೋರುವಂತೆ ಆಜ್ಞೆಯು ನ್ಯಿತ್ತರು.

ನಾಳೆಯ ಪಂಚಾಂಗ

ಅಸ್ಥಾನ ಮಹಾವಿದ್ವಾನ್ ಧರ್ಮಾಧಿಕಾರಿ
ದೈವಜ್ಞಶಿಖಾಮಣಿ
ಸಂಪಶ್ಯಕೃಷ್ಣ ಜೋಯಿಸರಿಂದ
12 ಶುಕ್ರವಾರ ಸಪ್ತಮಿ ಉತ್ತರಾಭಾದ್ರ

oo

ಬೊಂಬಾಯಿ — ಬೊಂಬಾಯಿ ಯೂತ್ ಕಾಂಗ್ರೆಸ್ಸಿನ ನಾಯಕ ಶ್ರೀ ರಾಮಕೃಷ್ಣ ಬಜಾಜ್, ಕೃಷ್ಣಮೆನನ್ನರನ್ನು ಚುನಾವಣೆಯಲ್ಲಿ ವಿರೋಧಿಸಲು ತನಗೆ ಸಂಪೂರ್ಣ ಸ್ವಾತಂತ್ರ್ಯವಿರಬೇಕೆಂದು ಕಾಂಗ್ರೆಸ್ಸ ಅಧ್ಯಕ್ಷರಿಗೆ ಬರೆದು ತಮ್ಮ ಸ್ಥಾನಕ್ಕೆ ರಾಜೀನಾಮೆ ಕೊಟ್ಟ ವಿಷಯವಾಗಿ ತಿಳಿಸಿರುವರು

ಚುನಾವಣೆ ವೆಚ್ಚಕ್ಕೆ ಸಾಲ

ಚುನಾವಣೆ ವೆಚ್ಚಕ್ಕೆ ಸಾಲ ಅಪೇಕ್ಷಿಸಿ ಚುನಾವಣೆ ಅಭ್ಯರ್ಥಿಗಳಿಂದ ಬಂದಿರುವ ಅರ್ಜಿಗಳನ್ನು ಪಾರ್ಲಿಮೆಂಟರಿ ಕಾಂಗ್ರೆಸು ಪಾರ್ಟಿಯ ಕಾರ್ಯಕಾರಿ ಸಮಿತಿ ಪರಿಶೀಲಿಸಿ, ಅರ್ಹತೆ ಪಡೆದ ಸಂದರ್ಭಗಳಲ್ಲಿ ಹಂಗಾಮಿಯಾಗಿ ರೂ. 3 ಸಾವಿರ ಸಾಲಕೊಡಲು ನಿರ್ಧರಿಸಿದೆ ಎಂದು ದೆಹಲಿ ವರದಿ

ಮಗುವಿನ ಮಾರಾಟ

ಕೊಯಮತ್ತೂರು ಬಳಿಯ ಕನ್ನರ ಪಾಳಯಂ ಗ್ರಾಮದ ರಾಮಣ್ಣ ಎಂಬವನು ಪಕ್ಕದ ಕುನ್ನಿವ ತ್ತೂಂಗಾಮದ ವಕ್ಕಳಿಲ್ಲದವನೊಬ್ಬನಿಗೆ ತನ್ನ 7 ತಿಂಗಳಿನ ತನ್ನ ವ ಗವನ್ನು ರೂ 10 ಕ್ಕೆ ಮಾರಿದನು. ಅವನ ಪತಿ ಪೋಲೀಸರ ಸಹಾಯದಿಂದ ಮಗುವನ್ನು ವಾಪಸು ಪಡೆದಳು

ರೇಷ್ಮೆ ಅಂಗಡಿ ಮುಚ್ಚಿದೆ

ಪೋರ್ಚುಗೀಸರ ಮಕಾವೋನಲ್ಲಿ ಭಾರತದ ರೇಷ್ಮೆ ಅಂಗಡಿಯನ್ನು ಮುಚ್ಚಿಸಲಾಗಿದೆ ಅಲ್ಲಿನ ಸ್ವತ್ತುಗಳೇನಾದವೆಂಬುದು ತಿಳಿದಿಲ್ಲ

ಮದ್ರಾಸು ಪ್ರವಾಸ ಇಲ್ಲ

ಪ್ರಧಾನಿ ಪಂ|| ನೆಹರು ಮದ್ರಾಸು ರಾಜ್ಯದಲ್ಲಿ ಚುನಾವಣೆ ಪ್ರಚಾರ ಮಾಡುವ ಸಂಭವವಿಲ್ಲ.

oo

ಆಂಧ್ರದಲ್ಲಿ ರಿಪಬ್ಲಿಕ್ ಪಾರ್ಟಿ ಸ್ವತಂತ್ರ ಪಕ್ಷದೊಡನೆ ಚುನಾವಣಾ ಒಪ್ಪಂದ ಮಾಡಿಕೊಳ್ಳುವದೆಂದು ಆಂಧ್ರ ಪ್ರದೇಶ ರಿಪಬ್ಲಿಕ್ ಪಾರ್ಟಿಯ ಪ್ರಧಾನ ಕಾರ್ಯದರ್ಶಿ ಶ್ರೀಮತಿ ಈಶ್ವರಿಬಾಯಿ ತಿಳಿಸಿದ್ದಾರೆ ಕಾಂಗ್ರೆಸು ಪಕ್ಷವನ್ನು ಪರಾಜಯಗೊಳಿಸುವದು ತಮ್ಮ ಉದ್ದೇಶ ಎಂದು ಅವರು ಹೈದರಾಬಾದಿನಲ್ಲಿ ನುಡಿದರು.

ವಿವಿಧ ವಿಷಯಗಳು

ಬೆಂಗಳೂರು 9

ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟರ ನ್ಯಾಯಾಲಯದ ಹೆಡ್ ಸ್ಟಿಯೋರ್ವನು ಅಕ್ರಮ ಸಂಭಾವನೆ ಸ್ವೀಕರಿಸಿದ ಆರೋಪದ ಮೇಲೆ ಎಚ್ಚರಿಕೆ ವಿಧಿಸಿದ್ದು ಈಗ ಅವನಿಗೆ ಬರುವ ಎರಡು ಬಡ್ತಿಗಳನ್ನು ಮುಂದಿನ ಬಡ್ತಿಗೆ ತೊಂದರೆ ಇಲ್ಲದಂತೆ ನಿಲ್ಲಿಸಲು ಆಜ್ಞೆ ಆಗಿದೆ

ಸಾರಿಗೆ ಇಲಾಖೆಯ ಓರ್ವ ಡ್ರೈವರು ಮತ್ತು ಕಂಡಕ್ಟರನ್ನು ಅಪಾದಿತರೆಂದು ಗಣಿಸಿ ಅವರಿಗೆ ಅನುಕ್ರಮವಾಗಿ 3 ಮತ್ತು 30ರೂ ದಂಡ ವಿಧಿಸಲಾಯಿತು

ನ್ಯಾಯ ಇಲಾಖೆಯ ಓರ್ವ ನಾಜರು ಮತ್ತು ಓರ್ವ ತಾಲ್ಲೂಕು ಕಿಂಸ್ಟೇದಾರರುಗಳು ಅನುಕ್ರಮವಾಗಿ 5 ರೂ. ಮತ್ತು 10 ರೂಗಳ ಅಕ್ರಮ ಸಂಭಾವನೆಗಳಿಗಾಗಿ ಬಂಧಿಸಲಾಯ್ತು

ಓವ್ಹರ್‌ಕಮರ್ಷಿಯಲ್ ಟ್ಯಾಕ್ಸು ಇನ್‌ಸ್ಪೆಕ್ಟರನು ಅಕ್ರಮ ಸಂಭಾವನೆ ಸ್ವೀಕರಿಸುತ್ತಿದ್ದಾಗ ಅವನನ್ನು ಬಂಧಿಸಲಾಯಿತು

oo

ಬೆಂಗಳೂರು ಲಾಲಬಾಗ ರಸ್ತೆಯಲ್ಲಿರುವ ಶ್ರೀ ಚಿದಗಂಗಾನಂದ ಆಶ್ರಮದಲ್ಲಿ ಭಾರತ ಸಾಧು ಸಮಾಜದ ರಾಜ್ಯ ಶಾಖೆ ಸದಾಚಾರ ಸಪ್ತಾಹ ಹಾಗೂ ವಿಶ್ವಶಾಂತಿ ಯಜ್ಞ ನಡೆಸುವದು. ಈ ಮಾಹೆ 26 ರಿಂದ 28 ರ ವರಿಗೆ ಈ ಕಾರ್ಯಕ್ರಮ.

ಪಹಜಾದಪುರದಲ್ಲಿ ಸಗುಣಿಕ ಎಂಬ ಹೆಸರಿನ ಕುದುರೆ ಮಂಣಹೊಂದಿತು ಆ ಕುದುರೆ ಅದಂ ಸಾಹುಕಾರನಿಗೆ ಬಂದ ನಂತರ ಅವನಿಗೆ ಅದೃಷ್ಟಬಂದಿತು ಕುದುರೆಯು ಮಂಣಹೊಂದಿದಾಗ ಅದರ ಸಂಸ್ಕಾರದಲ್ಲಿ 2 ಸಾವಿರ ಜನ ಭಾಗವಹಿಸಿದ್ದರು.

ಹಾಂಗಕಾಂಗಿನ ಹಾಂಗ್ಕೊ ಹೋಟೆಲಿಗೆ ಬೆಂಕಿಬಿದ್ದಾಗ ಚೀನಾ ಕಮ್ಯೂನಿಸ್ಟು ನಾಯಕ ಮಾತ್ಸೆತಂಗರು ಪ್ರಾಣ ಅಪಾಯದಿಂದ ಪಾರಾದರೆಂದು ಹಾಂಗ ಕಾಂಗಿನ ಟೈಗರ್ ಸ್ಟ್ಯಾಂಡರ್ಡ್ ಪ್ರಕಟಿಸಿದೆ,

ಸಂಗದ ಪ್ರತಿಫಲ

[ಬರೆದವರು— ಕೆ. ಪರಮೇಶ್ವರ ಭಟ್ಟರು, ಶುಂಠಿಹಕ್ಕಲು]

ಒಂದು ದಿನ ಕೈಲಾಸ ಪರ್ವತದಲ್ಲಿ ಪಾರ್ವತೀಪರಮೇಶ್ವರರು ಬ ಗು ವ ಭಕ್ತಾದಿಗಳನ್ನು ಈಕ್ಷಿಸುತ್ತಿದ್ದರು. ಜನಸಮೂಹವು ತಂಡೋಪತಂಡವಾಗಿ ಬರುವುದನ್ನು ಕಂಡು ಪಾರ್ವತೀದೇವಿಯು– ಪ್ರಾಣನಾಥ ! ಇಷ್ಟು ಜನ ನಮ್ಮ ಸಂದರ್ಶನಾರ್ಥವಾಗಿ ಬರುತ್ತಿರುವಂಲ್ಲಾ, ಅವರೆಲ್ಲರೂ ನಮ್ಮ ಪಾದವನ್ನೇ ಸೇ ಲಿಸುತ್ತಾರೆಯೇ ? ಅದಕ್ಕೆ ಶಿವನು– ಅಯ್ಯೋ ವಂಯೇ ನಮ್ಮ ಸಂದರ್ಶನಕ್ಕೆ ಬಂವರೆಲ್ಲರೂ ಸ್ವರ್ಗಸುಖವನ್ನು ಅನುಭವಿಸಲಾರರು ; ಇಷ್ಟು ಜ ನ ರ ಲ್ಲಿ ಒಬ್ಬನು ಭೂತ್ಯ ಬರುವವನಿದ್ದಾನೆ : ಅತನು ಪಾಪರಹಿತನಾಗಿದ್ದಾನೆ ; ಬೇಕಾದರೆ ನೋಡು ಸತ್ಯಾಂಶವನ್ನು ತೋರಿಸುತ್ತೇನೆ ; ಈಗ ನಾನ ರೋಗಿಷ್ಟನಾದ ವೃದ್ಧನ ವೇಷವನ್ನು ತಾಳುತ್ತೇನೆ ; ನೀನು ವೃದ್ಧೆಯ ವೇಷ ಬದಲಿಸಿಕೊ : ಅನಂ ತರ ನಾನು ಒಂದು ಮ ದ ಕೆಳಗೆ ನರಳುತ್ತಾ ಬ ಲಗುತ್ತೇನೆ , ನೀನು ಆ ದಾರಿಯ ಲ್ಲಿ ಒಂ ವ ಯಾತ್ರಿಕರೊಂದಿಗೆ, ' ಅವ್ವಾ, ಅಣ್ಣಾ, ನನ್ನ ನಾಥನಿಗೆ ಶುಂಬಾ ಖಾಯಿಲೆಯಾಗಿ ನರಳುತ್ತಿದ್ದಾನೆ : ಪುಣ್ಯಾತ್ಮರಾದವರು ಭಾಗೀರಥಿಯ ಒಂದು ತೊಟ್ಟು ನೀರು ತಂದು ಈತನ ಬಾಯಲ್ಲಿ ಬಿಟ್ಟರೆ ಬದುಕುತ್ತಾನೆ ; ಪುಣ್ಯಾತ್ಮರಾದರೂ ಈ ಕೆಲಸವನ್ನ ಮಾಡಿಕೊಡುವಿರಾ ? ಎಂದು ದೈನ್ಯದಿಂದ ಕೂಗು ತ್ತಿರು ; ವಂದಿನ ರಹಸ್ಯ ತಿಳಿದವಳಾಗಿಯೇ ತಿಳಿಯುತ್ತೆ ' ಎಂದು ಹೇಳಿ, ಶಿವ ಪಾರ್ವತಿ ಯರು ವೇಷ ಒದಲಾಯಿಸಿಕೊಂಡು, ಯಾತ್ರಿಕರು ಬರುವ ದಾರಿಯಲ್ಲಿ ಸಿದ್ಧ ರಾದರು

ಇತ್ತ ಯಾತ್ರಿಕರು ಕಾಶೀ ಯಾತ್ರೆಯನ್ನು ಕೈಗೊಂಡು ಶಿವಭಜನೆ ಮಾ ಡುತ್ತಾ ಬರುತ್ತಿದ್ದರು : ಆ ಸಮಯಕ್ಕೆ ಅವರಿಗೆ ಅಡ್ಡಲಾಗಿ ಒಬ್ಬ ಕಳ್ಳನು ಒಂದು ಎಲೈ ಯಾತ್ರಿಕರೇ, ನಿಮ್ಮಲ್ಲಿರುವ ಗಂಟುಮೂಟೆಯನ್ನು ಇಲ್ಲಿ ಕೊಡಿ, ಇಲ್ಲವಾದರೆ ನಿಮ್ಮ ತಲೆಯನ್ನು ಒಡೆದುಬಿಡುತ್ತೇನೆ ಎಂದು ಘರ್ಜಿಸಿದನು.

ಯಾತ್ರಿಕರು– ಅಯ್ಯಾ ನಿಲ್ಲು, ನೀನು ಯಾರು ? ಯಾವ ಊರು ? ಏಕೆ ಜನಗಳಿಗೆ ತೊಂದರೆ ಕೊಡುತ್ತೀಯೆ, ಎಂದು ಕೇಳಿದರು.

ಕಳ್ಳ— ಅದೆಲ್ಲಾ ಕೇಳಬೇಡಿ : ದಾರಿಗಂ ಗಂಟು ಒಡೆಯುವುದು ನನ್ನ ಕೆಲಸ ; ಗಂಟು ಕೊಡದಿದ್ದರೆ ತಲೆ ಒಡೆಯುವುದು ನನ್ನ ವೃತ್ತಿ ; ಅಲ್ಲದೆ ನಾನು– ದೇಶದೇಶವ ತಿರುಗಿ | ವೇಷಗಾರರಿಗೆಲ್ಲಾ | ವೇಷಗಳನು ಮಾಡಿ ॥ ಪ ॥ ಆ ಸಿರಿಯನು ತಂದು | ಲೇಸಾಗೆ ನಾನು | ಸಂತೋಷದಿ ಬಂದಿಂ ವೆ ॥ ಅ. ಪ ॥ ದಾರಿ ದಾರಿಯ ಕಟ್ಟಿ | ನೂರಾರು ತಲೆಗಳ | | ಹಾರಿಸಿ ಹಗಲಲ್ಲೆ ॥ ಯಾರಿಗು ಸಿಕ್ಕದೆ ಊರೂರು ತಿರುಗುವ | ಚೋರರಿಗೊಡೆಯಾ ನಾನೂ ॥ ೧ ॥ ಊರಿಗಾವಲ ಕಳವಾರರು | ತಿಳಿಯದೇ ಭಾರಿ ಪಜಾನೆಗಳಾ || ತೂರಿಭೇದಿಸಿ ಸಾಹುಕಾರರ ವಂನೆಗಳನಾ | ನೂರಾರು ಹೊಡೆದೆ ॥ ಕಲ್ಲು ಕವಣೆಗಳ | ಬಲ್ಲ ಭಕ್ಷಳಿಕೆಯು | ನ್ನೆಲ್ಲಾ ಕನ್ನದ ವಸ್ತುವ | ಎಲ್ಲಿ ಹೋದರು ಕಂಕುಳಲ್ಲೇ ಇಟ್ಟುಂವೆನು | ಬಲ್ಲಿದ ನೆಲ್ಲವೆನಾ ॥ ೨ ॥ ಹೊಡೆದು ದಾರಿಗಂನ್ನು | ಪಡವೇ ವಸ್ತುಗಳನ್ನು | ಬಿಡದೆ ಕೂಡಿಸುತಿರ್ಪೆನು | ಪೊಡವಿಯೊಳೆಲ್ಲರು | ಗಡಗಡ ಸಡಗುವರೆನ್ನ ಹೆಸಂಕೇಳಿ ॥೩॥ ದೇಶದೇಶವಾ ತಿರುಗಿ

[ಮಿಕ್ಕಿದ್ದು ನಾಳೆ ಸಂಚಿಕೆ

Help ' The Gorakshana '

ಗೋರಕ್ಷಣ ಪ್ರಾಣಿದಯಾ ಕಾರ್ಯಗಳು ಹೆಚ್ಚೆಚ್ಚಾಗಿ ನಡೆಯಲಿ

" ಗೋರಕ್ಷಣ " ಪತ್ರಿಕೆಗೆ ಬೆಂಬಲಿಗರಾಗಿರಿ

ಗೋರಕ್ಷಣೆ, ಪ್ರಾಣಿದಯ, ಪಶುವೈದ್ಯ, ಶಾಕಾಹಾರ ವಿಚಾರಗಳ ಪ್ರಚಾರ ಏಕೈಕ ಕನ್ನಡ ಪತ್ರಿಕೆ.

ಗೋರಕ್ಷಣ ಪತ್ರಿಕೆಗೆ ಸಹಾಯದ್ರವ್ಯ ಮತ್ತು ಪ್ರಕಟಿಸಲು ಅನುಕೂಲವಾದ ಲೇಖನಗಳನ್ನೂ ವಾರ್ತೆಗಳನ್ನೂ ವಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು

ವಿಳಾಸ : ಗೋರಕ್ಷಣ ಆಫೀಸ್, ಚಾಮರಾಜಪುರಂ, ಮೈಸೂರು 4

ವುಡ್‌ಲ್ಯಾಂಡ್ಸ್ ಜನಪ್ರಿಯ 5 ನೇ ವಾರ

ಜಬ್ ಪ್ಯಾರ್ ಕಿಸೀಸೆ ಹೋತಾಹೈ

ದೇವ್‌ಆನಂದ್, ಆಶಾ ಪರಾಖ್ ಮತ್ತಿರ ಪ್ರಖ್ಯಾತ ತಾರೆಯರು ಪಾಶ್ಚವಹಿಸಿರುವ ಅತ್ಯಂತ ಮನರಂಜನ ಹಿಂದಿ ಚಿತ್ರ [ದಿನವಹಿ 3 ಪ್ರದರ್ಶನಗಳು

ಆಪೆರಾ— ಜನಭರಿತ 2 ನೇ ವಾರ

ನಾಗಾರ್ಜುನ (ಕನ್ನಡ)

ತಾರಾಗಣ— ರಾಜಕುಮಾರ್, ನಾಗಯ್ಯ, ವಂಲಕ್ಷ್ಮಿ, ಹರಿಣಿ, ನರಸಿಂಹರಾಜು ಕಾಂತಾ ರಾವ್, ರಾಜನಾಲ [ದಿನವಹಿ 3 ಆಟಗಳು]



ಅಮೇರಿಕಾಕ್ಕೆ ಭೇಟಿ ಸಂಬಂಧದ ಚಿತ್ರಗಳು

For Quality Printing

L. N. Press

Sivarampet, Mysore

ಎಲ್ಲ ವಿಧದ ಆಯುರ್ವೇದ ಔಷಧಗಳಿಗೆ

ಅ ಶೋ ಕ ಫಾರ್ಮಸಿ

ಲ್ಯಾನ್ಸ್‌ಡೌನ್ ಬಜಾರ್ ಮೈಸೂರು

Edited, Printed & Published by the Proprietor, Dharma Prachara Nirata M. S. Krishna Rao. at the Satyavadi Press Chamarajapuram, Mysore 4.